ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 1, July-August, 2024, Pp. 55-63
©*IIMRD*, Mysuru
IIMRD JOURNALS
www.iimrd.com

# ಪಂಚಮಸಾಲಿ ಸಮುದಾಯದ ಸಂಘಟನೆ ಹಾಗೂ ಎದುರಿಸುತ್ತಿರುವ ಸವಾಲುಗಳು

**ಸಂದೀಪ ಆರ್[1] ಮತ್ತು ಡಾ. ಎಂ. ಪೂರ್ವಾಚಾರ್[2]**
ಸಂಶೋಧಕರು, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ, ಶಿವಮೊಗ್ಗ
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

**ಸಾರಾಂಶ: (Abstract)**

*'ಸಮಾಜದ ರಚನೆಯೇ ಸಾಮಾಜಿಕ ಸಂಘಟನೆ' ಎಂಬ ಪರಿಕಲ್ಪನೆ ಸಮಾಜಶಾಸ್ತ್ರದಲ್ಲಿ ಬಹಳಷ್ಟು ಮಹತ್ವ ಪಡೆದುಕೊಂಡಿದೆ. ಸಮಾಜದಲ್ಲಿ ರಚನೆ ಮತ್ತು ಸಂರಚನೆಗಳು ವ್ಯವಸ್ಥಿತವಾಗಿ ರೂಪುಗೊಂಡಾಗ ಮಾತ್ರ ಸಮಾಜ ರಚನೆಯಾಗುತ್ತದೆ. ಈ ರೀತಿಯ ರಚನಾತ್ಮಕ ಸಮಾಜದಲ್ಲಿ ಸಂಘಟನೆಯ ಅಂಶಗಳು ಮಹತ್ವದ ಪಾತ್ರ ವಹಿಸುತ್ತವೆ. ಸಮಾಜದ ಜನರು ಸಂಘಟನೆಯಾದಾಗ ಆ ಸಮಾಜದಲ್ಲಿನ ಐಕ್ಯತೆ ಹಾಗೂ ಸಮಗ್ರತೆಯ ಅಂಶಗಳು ಪ್ರಾಶಸ್ತ್ಯ ಪಡೆದುಕೊಳ್ಳುತ್ತವೆ. ಮಾನವ ಸಮಾಜದಲ್ಲಿ ಸಾಮಾಜಿಕ ಸಂಘಟನೆಗಳು ಹಲವಾರು ಕಾರ್ಯಗಳನ್ನು ಮಾಡುವುದರ ಮೂಲಕ ವ್ಯವಸ್ಥೆಯ ಭಾಗವಾಗಿ ರೂಪುಗೊಂಡಿವೆ. ಸಾಮಾಜಿಕ ಸಂಘಟನೆಗಳು ಹಲವಾರು ರೀತಿಯಲ್ಲಿ ಕಂಡುಬರುತ್ತವೆ. ಜಾತಿ ಸಂಘಟನೆ, ರಾಜಕೀಯ ಸಂಘಟನೆ, ಧಾರ್ಮಿಕ ಸಂಘಟನೆ ಹೀಗೆ ವಿವಿಧ ಹೆಸರುಗಳ ಮೂಲಕ ಸಂಘಟನೆಗಳು ಹುಟ್ಟಿಕೊಂಡಿವೆ. ಸಾಮಾಜಿಕ ಒಡನಾಟದ ಮೂಲಕ ಸಾಮಾಜಿಕ ಸಂಬಂಧಗಳು ಬೆಳೆಯುತ್ತವೆ. ಈ ಸಂಬಂಧಗಳು ಸಾಮಾಜಿಕ ಸಂಘಟನೆಗೆ ಅಸ್ಥಿಭಾರವಾಗಿವೆ. ಪ್ರಸ್ತುತ ಅಧ್ಯಯನದಿಂದ ಪಂಚಮಸಾಲಿಗರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸವಾಲುಗಳ ಕುರಿತು ತಿಳಿಯಬಹುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ 40 ಜನ ಮಾಹಿತಿದಾರರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ಪ್ರಸ್ತುತ ಪಂಚಮಸಾಲಿ ಸಮುದಾಯದವರ ಸಂಘಟನೆ ಮತ್ತು ಅವರು ಎದುರಿಸುತ್ತಿರುವ ಸವಾಲುಗಳ ಕುರಿತು ತಿಳಿಯುವಲ್ಲಿ ಬೆಳಕು ಚೆಲ್ಲುತ್ತದೆ.*

**ಮುಖ್ಯಪದಗಳು (Keywords):** ಪಂಚಮಸಾಲಿ, ಸಮಾಜ, ಸಂಘಟನೆ, ಸವಾಲುಗಳು.

## ಪೀಠಿಕೆ

ಭಾರತೀಯ ಸ್ತರ ವ್ಯವಸ್ಥೆಯ ಒಂದು ರೂಪವಾಗಿ ಜಾತಿ ಪದ್ಧತಿಯು ಬಹಳ ಹಿಂದಿನಿಂದಲೂ ತನ್ನೆಲ್ಲಾ ವೈಶಿಷ್ಟ್ಯತೆಗಳಿಂದ, ಸಂಪ್ರದಾಯಗಳಿಂದ ಆಚರಣೆಯಲ್ಲಿರುವ ಒಂದು ವ್ಯವಸ್ಥೆಯಾಗಿದೆ. ಮಾನವನ ವಿಕಾಸವಾದಾಗಿನಿಂದ ಪ್ರಸ್ತುತ ದಿನಮಾನದವರೆಗೂ ಮೇಲು–ಕೀಳು, ಉಚ್ಚ–ನೀಚ ಎಂಬಂತಹ

*Please cite this article as:* ಸಂದೀಪ ಆರ್ & ಎಂ. ಪೂರ್ವಾಚಾರ್. (2024). ಪಂಚಮಸಾಲಿ ಸಮುದಾಯದ ಸಂಘಟನೆ ಹಾಗೂ ಎದುರಿಸುತ್ತಿರುವ ಸವಾಲುಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(1). ಪು.ಸಂ.* 55–63

ತಾರತಮ್ಯಗಳು ಕಂಡುಬರುತ್ತಿರುವುದು ಸಾಮಾನ್ಯವಾಗಿದೆ. ಜಾತಿ ಪದ್ಧತಿಯ ಆಚರಣೆಯು ವೃತ್ತಿ ಹಾಗೂ ವರ್ಣದ ಆಧಾರದ ಮೇಲೆ ಬೆಳೆದು ಬಂದು ಇಂದಿಗೆ ಅದು ಒಂದು ದೊಡ್ಡ ಸಾಮಾಜಿಕ ಸಂಸ್ಥೆಯಾಗಿ ರೂಪುಗೊಂಡಿದೆ. ಭಾರತೀಯ ಸಮಾಜದಲ್ಲಿ ಹಲವಾರು ಜಾತಿ, ಉಪಜಾತಿಗಳು ಕಂಡುಬರುತ್ತಿದ್ದು, ಸಾಮಾಜಿಕ ಅಸಮಾನತೆ ಹಾಗೂ ಏಣಿ–ಶ್ರೇಣಿಯಂತಹ ಆಚರಣೆಗಳು ಜಾತಿಯಲ್ಲಿರುವುದು ಸಾಮಾನ್ಯವಾಗಿಬಿಟ್ಟಿದೆ. ಪ್ರತಿಯೊಂದು ಜಾತಿಯೂ ತನ್ನದೇ ಆದ ಸಾಮಾಜಿಕ ಸ್ಥಾನಮಾನವನ್ನು ಹೊಂದಿದ್ದು, ಅದರದ್ದೇ ಆದ ಸಾಮಾಜಿಕ ನೆಲೆಯನ್ನು ಕಂಡುಕೊಂಡಿದೆ. ಜಾತಿಯು ಸಮಾಜದಲ್ಲಿ ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸುವ ಒಂದು ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ಸಂಘಟಿತ ಸಮಾಜದಲ್ಲಿ ಸದಸ್ಯರುಗಳು ತಮ್ಮ ಪಾತ್ರವನ್ನು ವ್ಯವಸ್ಥಿತವಾಗಿ, ಸಾಮರ್ಥ್ಯಕ್ಕನುಗುಣವಾಗಿ ನಿರ್ವಹಿಸುತ್ತಾರೆ. ಪರಸ್ಪರ ಅನ್ಯೋನ್ಯ ಮನೋಭಾವನೆಗಳು ಜನರನ್ನು ಒಗ್ಗೂಡಿಸುವಲ್ಲಿ ಸಂಘಟನೆಯು ಪ್ರಮುಖ ಪಾತ್ರ ವಹಿಸುತ್ತದೆ. ಸಮಾನ ಮನಃಸ್ಥಿತಿಯುಳ್ಳ ವ್ಯಕ್ತಿಗಳ ಉತ್ತಮ ಸಂಘಟನೆಯು ದೀರ್ಘಕಾಲದವರೆಗೂ ಮುಂದುವರಿದುಕೊಂಡು ಹೋಗುವಂತಹ ಸಂಘಟನೆಯಾಗಿದೆ. ವಿವಿಧ ಗುಂಪುಗಳಲ್ಲಿರುವ ಜನರನ್ನು ಒಂದೆಡೆ ಸೇರಿಸುವುದೇ ಸಂಘಟನೆಯಾಗಿದೆ. ಈ ರೀತಿಯಾಗಿ ಸೇರಿದ ಜನರ ಗುಂಪು ತಮ್ಮ ಸಮುದಾಯದ ಪ್ರತಿಯೊಂದು ವಿಷಯದ ಕುರಿತಾದ ಹಲವು ಅಂಶಗಳನ್ನು ಸಮಾಜದ ಮುನ್ನೆಲೆಗೆ ತರಲು ಮತ್ತು ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಲು ಸಂಘಟನೆಯ ಅಗತ್ಯತೆ ಹೆಚ್ಚಿನದಾಗಿ ಕಂಡುಬರುತ್ತದೆ.

**ಸಾಹಿತ್ಯಾವಲೋಕನ**

ರಂಜಾನ್ ದರ್ಗಾ (2018) ಇವರ ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ ಪುಸ್ತಕದಲ್ಲಿ ಲಿಂಗಾಯತ ಧರ್ಮದ ಕುರಿತ ಕೆಲ ಪ್ರಶ್ನೆಗಳಿಗೆ ಉತ್ತರ ಹಾಗೂ ವಿವರಣೆಯನ್ನು ನೀಡಿದ್ದಾರೆ. ಲಿಂಗಾಯತ ಧರ್ಮದ ವಿವಿಧ ಕರ್ತವ್ಯಗಳನ್ನು ಲಿಂಗಾಯತರು ಅನುಸರಿಸುವುದರ ಕುರಿತು ತಿಳಿಸಿದ್ದಾರೆ. ಲಿಂಗಾಯತರಿಗೂ ಹಿಂದೂಗಳಿಗೂ ಇರುವ ಸಾಮ್ಯತೆಗಳು, ಅವರಲ್ಲಿ ಕಂಡುಬರುವ ಬದಲಾವಣೆ, ಲಿಂಗಾಯತರ ಆಚರಣೆಗಳಿಗೂ ಹಿಂದೂ ಸಂಪ್ರದಾಯಗಳ ನಡುವೆ ಕಂಡುಬರುವ ಭಿನ್ನತೆಗಳ ಕುರಿತು ಚರ್ಚಿಸಿದ್ದಾರೆ. ಲಿಂಗಾಯತರ ಶರಣರ ವಿಚಾರಧಾರೆಗಳ ಜೊತೆಗೆ ಲಿಂಗಾಯತರಿಗೂ ವೀರಶೈವರಿಗೂ ಇರುವ ಸಂಬಂಧದ ಬಗ್ಗೆ ಹಾಗೂ ಲಿಂಗಾಯತರು ವೀರಶೈವರು ಆಚರಿಸುವ ಆಚಾರ–ವಿಚಾರಗಳು ಒಂದೇ ಆದರೂ ಪದಗಳ ಹಿನ್ನೆಲೆಯಲ್ಲಿನ ಅರ್ಥಗಳು ಬೇರೆ ಬೇರೆ ರೀತಿಯಾಗಿವೆ ಎಂಬುದಾಗಿ ತಿಳಿಸಿದ್ದಾರೆ. ಲಿಂಗಾಯತರ ವೀರಶೈವರ ಕಾಲಘಟ್ಟಗಳ ಹಿನ್ನೆಲೆಯನ್ನು ಇಣುಕಿ ನೋಡಿ ಅವರ ಹಿನ್ನೆಲೆಯ ಆಧಾರದ ಮೇಲೆ ಅವರ ಬಗ್ಗೆ ಈ ಪುಸ್ತಕದಲ್ಲಿ ವಿಮರ್ಶಿಸಿದ್ದಾರೆ. ಈ ಪುಸ್ತಕವು ಪಂಚಮಸಾಲಿ ಸಮುದಾಯದ ಅಧ್ಯಯನದ ಹಿನ್ನೆಲೆಯಲ್ಲಿ ನೋಡುವುದಾದರೆ ಲಿಂಗಾಯತರ ವಿಚಾರಗಳ ಕುರಿತು ಲೇಖಕರು ಈ ಪುಸ್ತಕದಲ್ಲಿ ವಿವರಿಸಲಾಗಿದ್ದು, ಇದರಿಂದ ಬರುವುದೇನೆಂದರೆ ಲಿಂಗಾಯತರ ವಿಚಾರಧಾರೆಗಳೆಲ್ಲವೂ ಪಂಚಮಸಾಲಿಗಳಿಗೆ ಅನ್ವಯಿಸುವುದರಿಂದ ಲೇಖಕರು ತಿಳಿಸಿರುವ ಮಾಹಿತಿಯು ಅಧ್ಯಯನದ ದೃಷ್ಟಿಯಿಂದ ಉಪಯುಕ್ತವಾದುದಾಗಿದೆ.

ಹಿರೇಮಲ್ಲೂರು ಈಶ್ವರನ್ (2018) ಇವರ ಲಿಂಗಾಯತ ಧರ್ಮ ಒಂದು ಅಧ್ಯಯನ ಎಂಬ ಗ್ರಂಥದಲ್ಲಿ ಲಿಂಗಾಯತ ಧರ್ಮದ ಉಗಮ, ಬೆಳವಣಿಗೆಗೆ ಬಸವಾದಿ ಶರಣರು ಲಿಂಗಾಯತ ಧರ್ಮಕ್ಕೆ ನೀಡಿದ ಕೊಡುಗೆಗಳ ಬಗ್ಗೆ ವಿವರಿಸಿದ್ದಾರೆ. ವೀರಶೈವರ ಮೂಲ, ಇವರು ಯಾವ ಯಾವ ಕಾಲಘಟ್ಟದಿಂದ ಬೆಳೆದು ಬಂದರು, ಇವರುಗಳ ಮೂಲ ಐತಿಹಾಸಿಕತೆಯನ್ನು ಕೆಲವೊಂದು ಉಲ್ಲೇಖಗಳು ಹಾಗೂ ಬರವಣಿಗೆಗಳಲ್ಲಿ ಕಂಡುಬರುವ ಕುರುಹುಗಳ ಮೂಲಕ ವಿವರಿಸಿದ್ದಾರೆ. ಶರಣರ ಪೂರ್ವದಲ್ಲಿ ಇದ್ದಂತಹ ವೀರಶೈವರು ತಮ್ಮ ಮಠಮಾನ್ಯಗಳ ಮೂಲಕ ಜ್ಞಾನ ಪ್ರಸಾರ ಹಾಗೂ ಧಾರ್ಮಿಕ ದತ್ತಿ ಕಾರ್ಯಕ್ರಮಗಳನ್ನು ಆಚರಿಸುತ್ತಿದ್ದರು ಎಂಬುದಾಗಿ ಚಿತ್ರಿಸಿದ್ದಾರೆ. ಅಲ್ಲದೆ ಶರಣರ ಕಾಲದಲ್ಲಿ ಬೆಳಕಿಗೆ ಬಂದಂತಹ ಲಿಂಗಾಯತ ಧರ್ಮ, ಅದರ ಬೆಳವಣಿಗೆ, ಅದು ಯಾವ ರೀತಿಯಲ್ಲಿ ಮನ್ನಣೆ ಪಡೆದುಕೊಂಡಿತು, ಇವರ ಆಚರಣೆಗಳು ಎಷ್ಟರಮಟ್ಟಿಗೆ ತರ್ಕಬದ್ಧವಾಗಿವೆ ಎಂಬುದರ ಕುರಿತು ವಿವರಿಸಿದ್ದಾರೆ. ಲಿಂಗಾಯತರು ರಾಜಕೀಯವಾಗಿ ಬೆಳೆದುಬಂದ ದಾರಿ, ಅವರು ರಾಜಕೀಯ ಪ್ರವೇಶ ಮಾಡಿದ ಸಂದರ್ಭಗಳು ಯಾವ ರೀತಿ ಅದು ಸಮಾಜದ ಮೇಲೆ ಪರಿಣಾಮ ಬೀರಿದವು ಎಂಬುದರ ಉಲ್ಲೇಖ ಮಾಡಿದ್ದಾರೆ. ಧಾರ್ಮಿಕ ಚೌಕಟ್ಟಿನಲ್ಲಿ ಲಿಂಗಾಯತರು ಹೊಂದಿರುವ ಕೆಲ ರೂಢಿ–ಸಂಪ್ರದಾಯಗಳು ಬೇರೆ ಧರ್ಮೀಯರಿಗೆ ಭಿನ್ನವಾಗಿವೆ, ಲಿಂಗಾಯತರ ಆಚರಣೆ, ವೀರಶೈವರ ಆಚರಣೆಗಳೆರಡೂ ಒಂದೇ ರೀತಿಯ ಸಾಮ್ಯತೆ ಹೊಂದಿದ್ದರೂ, ಎರಡರ ದೃಷ್ಟಿಕೋನಗಳೂ ಬೇರೆಯದೇ ನೆಲೆಗಟ್ಟಿನ ಮೇಲೆ ನೋಡಲಾಗುತ್ತದೆ ಎಂಬುದಾಗಿ ತಿಳಿಸಿದ್ದಾರೆ. ಈ ಗ್ರಂಥವು ಪಂಚಮಸಾಲಿ ಸಮುದಾಯದ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಸಮುದಾಯವು ಲಿಂಗಾಯತರ ಒಂದು ಉಪಪಂಗಡವಾಗಿರುವುದರಿಂದ ಮೇಲಿನ ಎಲ್ಲಾ ಅಂಶಗಳು ಈ ಅಧ್ಯಯನಕ್ಕೆ ಸಮರ್ಪಕವಾದ ಮಾಹಿತಿಯನ್ನು ನೀಡುವುದರೊಂದಿಗೆ ವಿಶೇಷವಾದ ಕೆಲ ಅಂಶಗಳನ್ನು ತಿಳಿಯುವಲ್ಲಿ ಸಹಾಯಕವಾಗಿದೆ.

**ಅಧ್ಯಯನದ ಉದ್ದೇಶ**

1. ಪಂಚಮಸಾಲಿಗರು ಎದುರಿಸುತ್ತಿರುವ ಸಂಘಟನೆಯ ಕುರಿತು ಅಧ್ಯಯನ ಮಾಡುವುದು.
2. ಪಂಚಮಸಾಲಿಗರು ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸುವುದು.

**ಸಂಶೋಧನಾ ಸಮಸ್ಯೆಯ ಹೇಳಿಕೆ**

ಪ್ರಸ್ತುತ ಸಂಶೋಧನೆಯು ಪಂಚಮಸಾಲಿ ಸಮುದಾಯದ ಸಂಘಟನೆ ಹಾಗೂ ಎದುರಿಸುತ್ತಿರುವ ಸವಾಲುಗಳ ಕುರಿತು ತಿಳಿಯುವುದಾಗಿದೆ.

**ಅಧ್ಯಯನ ಮಾದರಿ**

ಪ್ರಸ್ತುತ ಅಧ್ಯಯನಕ್ಕಾಗಿ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ 40 ಜನರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಕಲೆಹಾಕಲಾಗಿದೆ.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ವಿಧಾನಗಳನ್ನು ಬಳಸಿಕೊಂಡು ಕ್ಷೇತ್ರಾಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ಗುಣಾತ್ಮಕ ಮತ್ತು ವಿವರಣಾತ್ಮಕ ಸ್ವರೂಪದ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಮಾಹಿತಿದಾರರಿಗೆ ಸಂದರ್ಶನ ಅನುಸ್ರಚಿಯನ್ನು ಮಾರ್ಗದರ್ಶಕರ, ವಿಷಯ ಪರಿಣಿತರ, ತಜ್ಞರ ಸಹಾಯದಿಂದ ರೂಪಿಸಿ ಪೂರ್ವಪರೀಕ್ಷೆಗೆ ಒಳಪಡಿಸಿ ಅಂತಿಮವಾಗಿ ಪರಿಪೂರ್ಣ ಸಂದರ್ಶನ ಅನುಸೂಚಿಯನ್ನು ತಯಾರಿಸಿ ಮಾಹಿತಿ ಸಂಗ್ರಹಿಸಲಾಗಿದೆ.

**ಮಾಹಿತಿ ಸಂಗ್ರಹಣೆ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಪ್ರಾಥಮಿಕ ಮೂಲಗಳು ಅಧ್ಯಯನ ಕ್ಷೇತ್ರದಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಮಾಹಿತಿ ಸಂಗ್ರಹಣೆಯ ಮೂಲಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಅವುಗಳೆಂದರೆ

***ಪ್ರಾಥಮಿಕ ಮಾಹಿತಿ :*** ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕರು ಕಾರ್ಯಪ್ರವೃತ್ತರಾಗಿದ್ದು, ವಾಸ್ತವಿಕ ಕ್ಷೇತ್ರದಿಂದ ತಾವೇ ನೇರವಾಗಿ ಮಾಹಿತಿದಾರರನ್ನು ಸಂದರ್ಶನಕ್ಕೆ ಒಳಪಡಿಸಿ ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಮಾಹಿತಿ ಸಂಗ್ರಹಿಸಲಾಗುವುದು ಹಾಗೂ ಮಾಹಿತಿಗಳನ್ನು ಪುಷ್ಟೀಕರಿಸಲು ವಿದ್ಯಮಾನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ.

***ಆನುಷಾಂಗಿಕ ಮಾಹಿತಿ :*** ಪ್ರಸ್ತುತ ಅಧ್ಯಯನಕ್ಕೆ ಅಗತ್ಯವೆನಿಸಿದ ಮಾಧ್ಯಮಿಕ ಮಾಹಿತಿಗಳನ್ನು ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಗ್ರಂಥಗಳು, ಪುಸ್ತಕಗಳು, ಸಮೀಕ್ಷಾ ವರದಿಗಳು, ಪತ್ರಿಕೆಗಳು, ಅಂತರ್ಜಾಲ, ಮಹಾಪ್ರಬಂಧಗಳು, ವಿಶ್ವಕೋಶಗಳು ಇನ್ನೂ ಮುಂತಾದವುಗಳಿಂದ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

***ಸಂದರ್ಶನ :*** ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

***ಅವಲೋಕನ :*** ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರಕ್ಕೆ ನೇರವಾಗಿ ಭೇಟಿ ನೀಡಿ ವಾಸ್ತವ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ಹಾಗೂ ವೈಜ್ಞಾನಿಕ ದೃಷ್ಟಿಕೋನಗಳಿಂದ ಅವಲೋಕಿಸಿ ವಸ್ತುನಿಷ್ಠ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ವಿಶ್ಲೇಷಣೆ**

ಮೇಲೆ ತಿಳಿಸಿದ ಸಂಶೋಧನಾ ವಿಧಾನಗಳು, ತಂತ್ರಗಳು ಹಾಗೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಸಂಶೋಧನಾ ಮಾಹಿತಿಯನ್ನು ಪರಿಮಾಣಾತ್ಮಕ ಹಾಗೂ ಗುಣಾತ್ಮಕ ವಿಧಾನದಿಂದ ವಿಶ್ಲೇಷಿಸಿ,

ಸಾಂಕೇತೀಕರಣ, ಪರಿಷ್ಕರಣೆ, ವರ್ಗೀಕರಣ ಹಾಗೂ ಸೂಚೀಕರಣದ ಮೂಲಕ ಹಾಗೂ ಅಗತ್ಯವಿದ್ದಷ್ಟು ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

**ಸಂಘಟನೆ**

ಸಮಾಜಶಾಸ್ತ್ರದಲ್ಲಿ ಸಮುದಾಯ ಎಂಬ ಪದಕ್ಕೆ ಬಹಳ ವಿಶಿಷ್ಟ ಸ್ಥಾನವಿದೆ. ಸಮಾಜದಲ್ಲಿ ಸಮುದಾಯ ಸಂಘಟನೆಯು ಸಾಮಾಜಿಕ, ಆರೋಗ್ಯ ಮತ್ತು ದಕ್ಷತೆಯನ್ನು ಸಂಪಾದಿಸುವುದರ ಮೂಲಕ ಇದೊಂದು ಪ್ರಮುಖ ವಿಧಾನವೆಂದು ಪರಿಗಣಿಸಲಾಗಿದೆ. ಲಿಂಡ್‌ಮನ್ ಅವರ ಪ್ರಕಾರ "ಒಂದು ಸಮುದಾಯವು ಭೌತಿಕವಾಗಿ ನಿರ್ದಿಷ್ಟ ಪರಿಸ್ಥಿತಿಗಳನ್ನು ತೃಪ್ತಿಗೊಳಿಸುವ ಬಿಂದುರೇಖೆ ಹಾಗೂ ಮಾನಸಿಕ ಪ್ರಜ್ಞೆಯನ್ನು ಹೊಂದಿರುವ ಒಂದು ಸಂಕೀರ್ಣ ಸಾಮಾಜಿಕ ಅಸ್ತಿತ್ವವುಳ್ಳದ್ದು" ಎಂಬುದಾಗಿ Lindeman (1921) ತಿಳಿಸಿದ್ದಾರೆ. ಸಮುದಾಯ ಸಂಘಟನೆಗಳು ಸಾಮಾಜಿಕ ಸಮಸ್ಯೆಗಳನ್ನು ದೂರ ಮಾಡುವುದರ ಜೊತೆಗೆ ಸಮುದಾಯದ ಐಕ್ಯತೆ, ಬೆಳವಣಿಗೆ, ಅಭಿವೃದ್ಧಿ ಮೊದಲಾದ ಅಂಶಗಳನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ಸಮುದಾಯವು ತನ್ನದೇ ಆದ ಸಂಘಟನೆ ಹೊಂದುವುದರೊಂದಿಗೆ ಸಮಾಜದಲ್ಲಿ ತನ್ನ ನೆಲೆಯನ್ನು ಕಂಡುಕೊಳ್ಳುತ್ತದೆ. ಮಾಹಿತಿದಾರರು ಪಂಚಾಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದರ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ 1: ಪಂಚಾಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದರ ವಿವರ**

| ಪ್ರತಿಕ್ರಿಯೆ | ಆವೃತ್ತಿ | ಶೇಕಡವಾರು |
|---|---|---|
| ಹೌದು | 28 | 70.00 |
| ಇಲ್ಲ | 12 | 30.00 |
| **ಒಟ್ಟು** | **40** | **100.00** |

ಮೇಲ್ಕಂಡ ಕೋಷ್ಟಕದಲ್ಲಿ ಪಂಚಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದರ ವಿವರವನ್ನು ತಿಳಿಸಲಾಗಿದೆ. ಒಟ್ಟು ಸಂದರ್ಶಿತರಲ್ಲಿ ಶೇಕಡ 70ರಷ್ಟು ಸ್ವ–ಜಾತಿ ನಿಷ್ಠೆ ಹೊಂದಿದ್ದು, ತಮ್ಮ ಸಮುದಾಯದ ಸಂಘಟಕರಾಗಿರುವುದರಿಂದ ಸಮುದಾಯದ ಅಭಿವೃದ್ಧಿ ಹಾಗೂ ಸೇವೆ ಮಾಡಿದಂತಾಗುತ್ತದೆಂಬ ಮನೋಭಾವನೆಯಿಂದ ಪಂಚಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದಾಗಿ ತಿಳಿಸಿದ್ದಾರೆ. ಇನ್ನುಳಿದಂತೆ ಶೇಕಡ 30ರಷ್ಟು ಪಂಚಾಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದಾಗಿ ತಿಳಿಸಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ, ಜಾತಿ ಸಂಘಟನೆಗಳಿಂದ ಸಮುದಾಯದ ಜನರಲ್ಲಿ ಸಾಮಾಜಿಕ ವಿವೇಚನೆಯ ಜೊತೆಗೆ ಅವರಲ್ಲಿರುವ ಭಿನ್ನಾಭಿಪ್ರಾಯಗಳು ದೂರವಾಗಿ ಸಾಮಾಜಿಕವಾಗಿ ಸಂಘಟಿತರಾಗುವಂತೆ ಮಾಡುತ್ತದೆ.

**ಜಾತಿ ಸಂಘಟನೆ**

ಪ್ರಸ್ತುತ ದಿನಗಳಲ್ಲಿ ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆ ಅಸ್ತಿತ್ವದಲ್ಲಿರುವುದನ್ನು ಗಮನಿಸಿದಾಗ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತದಂತಹ ರಾಷ್ಟ್ರದಲ್ಲಿ ಜಾತಿಯು ಸೂಕ್ಷ್ಮ ಹಾಗೂ ಪ್ರಮುಖ ಸ್ಥಾನ ವಹಿಸುತ್ತದೆ. ಪ್ರತಿಯೊಂದು ಜಾತಿಯೂ ತನ್ನದೇ ಆದ ಸಂಘಟನೆಯನ್ನು ಕಟ್ಟಿಕೊಳ್ಳುವುದರ ಮೂಲಕ ಸಾಮಾಜಿಕ ಸ್ತರವಿನ್ಯಾಸದಲ್ಲಿ ಜಾತಿಯ ಪ್ರಭುತ್ವವನ್ನು ಎತ್ತಿತೋರಿಸುತ್ತಿವೆ. ಈ ಸಂಘಟನೆಗಳು ಜಾತಿಯ ಸದಸ್ಯರನ್ನು ಒಟ್ಟಿಗೆ ಇರುವಂತೆ ಮಾಡುತ್ತವೆ ಹಾಗೂ 'ನಾವು–ನಮ್ಮವರು' ಎನ್ನುವ ಮನೋಭಾವನೆಯನ್ನು ಜನರ ಮನಸ್ಸಿನಲ್ಲಿ ಬೆಳೆಸಿ ತಮ್ಮ ಜಾತಿಯ ಸದಸ್ಯರುಗಳನ್ನು ಸಂಘಟಿಸಲಾಗುತ್ತದೆ. ಈ ರೀತಿ ಜಾತಿ–ಜಾತಿಗಳಲ್ಲಿನ ಸಂಘಟನೆಗಳು ರಾಜಕೀಯ ಹಾಗೂ ಇತರೆ ಕ್ಷೇತ್ರಗಳಲ್ಲಿ ತಮ್ಮ ಪ್ರಾಬಲ್ಯ ಹಾಗೂ ಇನ್ನಿತರೆ ವಿಚಾರಗಳ ಕುರಿತು ತಮ್ಮ ಅಸ್ಮಿತೆಯನ್ನು ತೋರ್ಪಡಿಸುವುದು ಸಾಮಾನ್ಯ ವಿಷಯವಾಗಿದೆ. ಭಾರತೀಯ ಸಮಾಜದಲ್ಲಿ ಜಾತಿಯು ಬಲವಾಗಿ ಬೇರೂರಿರುವುದರಿಂದ ಪ್ರಸ್ತುತ ದಿನಗಳಲ್ಲಿ ಪ್ರತಿಯೊಂದು ಜಾತಿಯೂ ಐಕ್ಯತೆಯನ್ನು ಹೊಂದಿದೆ. ಎಂ.ಎನ್. ಶ್ರೀನಿವಾಸ್ ಅವರು "ಭಾರತೀಯ ಸಮಾಜದಲ್ಲಿ ಪ್ರಜಾಸತ್ತಾತ್ಮಕವಾಗಿ ಕಾರ್ಯಪ್ರವೃತ್ತಗೊಳ್ಳಲು ಜಾತಿ ಸಮುದಾಯಗಳು ಸಾಧನಗಳಾಗಿ ಕಂಡುಬರುತ್ತವೆ" ಎಂದು Srinivas (1972) ತಿಳಿಸಿದ್ದಾರೆ. ಮಾಹಿತಿದಾರರು ಪಂಚಮಸಾಲಿ ಸಂಘಟನೆಯ ಪರಿಚಯವಿರುವುದರ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ 2: ಪಂಚಮಸಾಲಿ ಸಂಘಟನೆಯ ಪರಿಚಯವಿರುವುದರ ವಿವರ**

| **ಸಂಘಟನೆಯ ಪರಿಚಯ** | **ಆವೃತ್ತಿ** | **ಶೇಕಡವಾರು** |
|---|---|---|
| ಇದೆ | 34 | 85.00 |
| ಇಲ್ಲ | 06 | 15.00 |
| **ಒಟ್ಟು** | **40** | **100.00** |
| **ಸಂಘಟನೆಯ ಪರಿಚಯವಿರುವುಕ್ಕೆ ಕಾರಣಗಳು** | **ಆವೃತ್ತಿ (N=34)** | **ಶೇಕಡವಾರು** |
| ಜಾತಿ ಎಂಬ ಭಾವನೆಯಿಂದಾಗಿ | 14 | 41.17 |
| ಮೂಲಭೂತ ಅವಶ್ಯಕತೆಗಾಗಿ | 16 | 47.06 |
| ಅಧಿಕಾರಕ್ಕಾಗಿ | 01 | 02.94 |
| ಆರ್ಥಿಕ ನೆರವಿಗಾಗಿ | 06 | 17.64 |
| ಜಾತಿಯನ್ನು ಬಲಿಷ್ಠಗೊಳಿಸಲು | 29 | 85.29 |
| ಇತರೆ | 01 | 02.94 |

ಮೇಲ್ಕಂಡ ಕೋಷ್ಟಕದಲ್ಲಿ ಪಂಚಮಸಾಲಿ ಸಂಘಟನೆಯ ಪರಿಚಯವಿರುವುದರ ವಿವರವನ್ನು ತಿಳಿಸಲಾಗಿದೆ. ಸಂದರ್ಶಿತ ಒಟ್ಟು 40 ಜನ ಮಾಹಿತಿದಾರರಲ್ಲಿ ಹೆಚ್ಚಿನವರು ಶೇಕಡ 85ರಷ್ಟು ಪಂಚಮಸಾಲಿ ಸಂಘಟನೆಯ ಪರಿಚಯವಿದೆ ಎಂದು ತಿಳಿಸಿದ್ದಾರೆ. ಮುಂದುವರಿದು ಸಂಘಟನೆಯ ಪರಿಚಯವಿರುವುಕ್ಕೆ ಕಾರಣಗಳನ್ನು ಗಮನಿಸುವುದಾದರೆ ಶೇಕಡ 41.17ರಷ್ಟು ಜಾತಿ ಎಂಬ ಭಾವನೆಯಿಂದಾಗಿ ಸಂಘಟನೆಯ

ಪರಿಚಯವಿರುವುದಾಗಿ ತಿಳಿಸಿದರೆ, ಶೇಕಡ 47.06ರಷ್ಟು ಮೂಲಭೂತ ಅವಶ್ಯಕತೆಗಾಗಿ ಪರಿಚಯವಿರುವುದಾಗಿ, ಶೇಕಡ 2.94ರಷ್ಟು ಅಧಿಕಾರಕ್ಕಾಗಿ ಎಂದು, ಶೇಕಡ 17.64ರಷ್ಟು ಆರ್ಥಿಕ ನೆರವು ಪಡೆಯುವುದಕ್ಕೋಸ್ಕರ, ಶೇಕಡ 85.29ರಷ್ಟು ಜಾತಿಯನ್ನು ಬಲಿಷ್ಠಗೊಳಿಸಲು ಹಾಗೂ ಇನ್ನುಳಿದಂತೆ ಶೇಕಡ 2.94ರಷ್ಟು ಇತರೆ ಅಂದರೆ ಸ್ವ–ಜಾತಿ ನಿಷ್ಠೆಯ ಕಾರಣದಿಂದ ಸಂಘಟನೆಯ ಪರಿಚಯವಿರುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಹೆಚ್ಚಿನವರು ಶೇಕಡ 85.29ರಷ್ಟು ಜಾತಿಯನ್ನು ಬಲಿಷ್ಠಗೊಳಿಸಲು ಸಂಘಟನೆಯ ಪರಿಚಯವಿರುವುದಾಗಿ ತಿಳಿಸಿರುವುದು ಕಂಡುಬಂದಿದೆ. ಇನ್ನುಳಿದಂತೆ ಶೇಕಡ 15ರಷ್ಟು ಸಂಘಟನೆಯ ಮಾಹಿತಿ ಕೊರತೆ ಇರುವುದರಿಂದಾಗಿ ಪಂಚಮಸಾಲಿ ಸಂಘಟನೆಯ ಪರಿಚಯವಿಲ್ಲ ಎಂದು ತಿಳಿಸಿದ್ದಾರೆ. ಇಲ್ಲಿ "ಡಿ.ಎನ್. ಮಜುಂದಾರ್ ಮತ್ತು ಟಿ.ಎನ್. ಮದನ್ ತಿಳಿಸಿರುವಂತೆ ಜಾತಿ ಒಂದು ಮುಚ್ಚಿದ ವ್ಯವಸ್ಥೆಯಾಗಿದೆ" (Ramanath Sharma, 1979) ಎಂಬ ಅಂಶವನ್ನು ಗಮನಿಸಬಹುದಾಗಿದೆ. ಇದರಿಂದ ವ್ಯಕ್ತವಾಗುವುದೇನೆಂದರೆ, ಜಾತಿ ಸಂಘಟನೆಗಳು ಸಮುದಾಯದ ಜನರನ್ನು ಒಟ್ಟುಗೂಡಿಸುವುದರ ಜೊತೆಗೆ ಸಾಮಾಜಿಕ ರಚನೆಯಲ್ಲಿ ಸಂಘಟನೆಗಳನ್ನು ಬಲಪಡಿಸುತ್ತವೆ. ಸಮುದಾಯಗಳಲ್ಲಿನ ವಿಘಟನೆಗಳು ದೂರವಾಗಿ ಸಂಘಟನಾತ್ಮಕ ಮನೋಭಾವನೆ ಪ್ರತಿಯೊಬ್ಬರಲ್ಲೂ ಬೆಳೆಯುವಂತೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಜಾತಿ ಸಂಘಟನೆಗಳು ಸಮುದಾಯಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಕೋಷ್ಟಕ 3: **ಜಾತಿ ಸಂಘಟನೆಯಿಂದಾಗುವ ಪ್ರಯೋಜನಗಳು**

| **ಸಂಘಟನೆಯಿಂದಾಗುವ ಪ್ರಯೋಜನಗಳು** | **ಆವೃತ್ತಿ (N=34)** | **ಶೇಕಡವಾರು** |
|---|---|---|
| ವೈಯಕ್ತಿಕ ಅಭಿವೃದ್ಧಿ | 15 | 44.11 |
| ಆರ್ಥಿಕ ನೆರವು | 19 | 55.88 |
| ಮಾನಸಿಕ ನೆಮ್ಮದಿ | 15 | 44.11 |
| ವ್ಯಕ್ತಿಗತ ರಕ್ಷಣೆ | 18 | 52.94 |
| ಕೌಶಲ್ಯಾಭಿವೃದ್ಧಿ | 17 | 50.00 |
| ಸ್ವಜಾತಿ ನಿಷ್ಠೆ | 14 | 41.17 |
| ರಾಜಕೀಯ ಶಕ್ತಿ | 14 | 41.17 |

ಮೇಲ್ಕಂಡ ಕೋಷ್ಟಕದಲ್ಲಿ ಜಾತಿ ಸಂಘಟನೆಯಿಂದಾಗುವ ಪ್ರಯೋಜನಗಳ ಕುರಿತು ಚರ್ಚಿಸಲಾಗಿದ್ದು, ಒಟ್ಟು ಸಂದರ್ಶಿತರಲ್ಲಿ ಶೇಕಡ 44.11ರಷ್ಟು ವೈಯಕ್ತಿಕ ಅಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರೆ, ಶೇಕಡ 55.88ರಷ್ಟು ಆರ್ಥಿಕ ನೆರವು ದೊರೆಯುತ್ತದೆ ಎಂದು, ಶೇಕಡ 44.11ರಷ್ಟು ಮಾನಸಿಕ ನೆಮ್ಮದಿ ದೊರೆಯುತ್ತದೆ ಎಂದು, ಶೇಕಡ 52.94ರಷ್ಟು ವ್ಯಕ್ತಿಗತ ರಕ್ಷಣೆಯಾಗುತ್ತದೆ ಎಂದು, ಶೇಕಡ 50ರಷ್ಟು ಕೌಶಲ್ಯಾಭಿವೃದ್ಧಿಯಾಗುವುದಾಗಿ, ಶೇಕಡ 41.17ರಷ್ಟು ಸ್ವಜಾತಿ ನಿಷ್ಠೆ ಬೆಳೆಯುತ್ತದೆ ಎಂದು ಮತ್ತು ಇನ್ನುಳಿದಂತೆ ಶೇಕಡ 41.17ರಷ್ಟು ರಾಜಕೀಯ ಶಕ್ತಿ ವೃದ್ಧಿಯಾಗುತ್ತದೆ ಎಂದು ತಿಳಿಸಿದ್ದಾರೆ. ಇಲ್ಲಿ ಹೆಚ್ಚಿನವರು ಶೇಕಡ 44.11ರಷ್ಟು ಜಾತಿ ಮೇಲಿನ ಅಭಿಮಾನದಿಂದ ಜಾತಿ ಸಂಘಟನೆ ಸೇರುವ ಮೂಲಕ ಮಾನಸಿಕ ಮಾನಸಿಕ ನೆಮ್ಮದಿ ದೊರೆಯುತ್ತದೆ ಎಂದು ತಿಳಿಸಿದ್ದಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ,

ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಜಾತಿಯೂ ಭದ್ರವಾಗಿ ಬೇರೂರಿರುವುದರಿಂದ ಬಹುತೇಕರಲ್ಲಿ ಜಾತಿ ಅಭಿಮಾನ ಹೆಚ್ಚುತ್ತಿದ್ದು, ಜಾತಿ ಸಂಘಟನೆ, ಜಾತಿ ಅಭಿಮಾನ ಹಾಗೂ ಜಾತಿಯ ಇತರೆ ಕಾರ್ಯಚಟುವಟಿಕೆಗಳಲ್ಲಿ ಆಯಾ ಜಾತಿಯಲ್ಲಿನ ಜನರು ನಿಷ್ಠಾಪೂರ್ವಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಅಧ್ಯಯನದಿಂದ ವ್ಯಕ್ತವಾದ ಅಂಶಗಳು**

- ಪಂಚಾಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದರ ವಿವರದ ಕುರಿತಂತೆ ಶೇಕಡ 70ರಷ್ಟು ಸ್ವ–ಜಾತಿ ನಿಷ್ಠೆ ಹೊಂದಿದ್ದು, ತಮ್ಮ ಸಮುದಾಯದ ಸಂಘಟಕರಾಗಿರುವುದರಿಂದ ಸಮುದಾಯದ ಅಭಿವೃದ್ಧಿ ಹಾಗೂ ಸೇವೆ ಮಾಡಿದಂತಾಗುತ್ತದೆಂಬ ಮನೋಭಾವನೆಯಿಂದ ಪಂಚಮಸಾಲಿ ಸಮುದಾಯದ ಸಂಘಟನೆಯ ಸದಸ್ಯರಾಗಿರುವುದಾಗಿ ತಿಳಿಸಿದ್ದಾರೆ.

- ಪಂಚಮಸಾಲಿ ಸಂಘಟನೆಯ ಪರಿಚಯವಿರುವುದರ ವಿವರಕ್ಕೆ ಸಂಬಂಧಿಸಿದಂತೆ ಹೆಚ್ಚಿನವರು ಶೇಕಡ 85ರಷ್ಟು ಪಂಚಮಸಾಲಿ ಸಂಘಟನೆಯ ಪರಿಚಯವಿದೆ ಎಂದು ತಿಳಿಸಿದ್ದಾರೆ. ಶೇಕಡ 85.29ರಷ್ಟು ಜಾತಿಯನ್ನು ಬಲಿಷ್ಠಗೊಳಿಸಲು ಸಂಘಟನೆಯ ಪರಿಚಯವಿರುವುದಾಗಿ ತಿಳಿಸಿರುವುದು ಕಂಡುಬಂದಿದೆ. ಜಾತಿ ಸಂಘಟನೆಗಳು ಸಮುದಾಯದ ಜನರನ್ನು ಒಟ್ಟುಗೂಡಿಸುವುದರ ಜೊತೆಗೆ ಸಾಮಾಜಿಕ ರಚನೆಯಲ್ಲಿ ಸಂಘಟನೆಗಳನ್ನು ಬಲಪಡಿಸುತ್ತವೆ. ಸಮುದಾಯಗಳಲ್ಲಿನ ವಿಘಟನೆಗಳು ದೂರವಾಗಿ ಸಂಘಟನಾತ್ಮಕ ಮನೋಭಾವನೆ ಪ್ರತಿಯೊಬ್ಬರಲ್ಲೂ ಬೆಳೆಯುವಂತೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಜಾತಿ ಸಂಘಟನೆಗಳು ಸಮುದಾಯಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

- ಜಾತಿ ಸಂಘಟನೆಯಿಂದಾಗುವ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಶೇಕಡ 44.11ರಷ್ಟು ಜಾತಿ ಮೇಲಿನ ಅಭಿಮಾನದಿಂದ ಜಾತಿ ಸಂಘಟನೆ ಸೇರುವ ಮೂಲಕ ಮಾನಸಿಕ ಮಾನಸಿಕ ನೆಮ್ಮದಿ ದೊರೆಯುತ್ತದೆ ಎಂದು ತಿಳಿಸಿದ್ದಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ, ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಜಾತಿಯೂ ಭದ್ರವಾಗಿ ಬೇರೂರಿರುವುದರಿಂದ ಬಹುತೇಕರಲ್ಲಿ ಜಾತಿ ಅಭಿಮಾನ ಹೆಚ್ಚುತ್ತಿದ್ದು, ಜಾತಿ ಸಂಘಟನೆ, ಜಾತಿ ಅಭಿಮಾನ ಹಾಗೂ ಜಾತಿಯ ಇತರೆ ಕಾರ್ಯಚಟುವಟಿಕೆಗಳಲ್ಲಿ ಆಯಾ ಜಾತಿಯಲ್ಲಿನ ಜನರು ನಿಷ್ಠಾಪೂರ್ವಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಸಲಹೆಗಳು**

- ಪಂಚಮಸಾಲಿ ಸಂಘಟನೆಯ ಬಗ್ಗೆ ಜಾಗೃತಿ ಮೂಡಿಸಬೇಕು.

- ಪಂಚಮಸಾಲಿ ಸಂಘಟನೆಗೆ ಸರ್ಕಾರದಿಂದ ಆರ್ಥಿಕ ನೆರವು ನೀಡುವುದರ ಮೂಲಕ ಸಂಘಟನೆಗೆ ಪ್ರೋತ್ಸಾಹಿಸಬೇಕು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ, ಪಂಚಮಸಾಲಿ ಸಂಘಟನೆಯು ಪಂಚಮಸಾಲಿ ಸಮುದಾಯದ ಜನರನ್ನು ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಒಂದು ಸಮುದಾಯ ತನ್ನ ಸಮುದಾಯದ ಜನರನ್ನು ಸಂಘಟಿಸುವುದರೊಂದಿಗೆ ಜನರ ಐಕ್ಯತೆ ಹಾಗೂ ಸಾಮುದಾಯಿಕ ಮನೋಭಾವನೆಯನ್ನು ಜನರಲ್ಲಿ ಮೂಡಿಸುತ್ತದೆ ಹಾಗೂ ಸಂಘಟನೆಯಿಂದ ಸಾಮಾಜಿಕ ಒಡನಾಟವನ್ನು ಸೃಷ್ಟಿಸುವುದರೊಂದಿಗೆ ಸಮಾಜದಲ್ಲಿ ಸಂಘಟಿತ ಸಮುದಾಯವನ್ನಾಗಿ ಹಾಗೂ ಜನರ ಮನೋಭಾವನೆಗಳನ್ನು ಉತ್ತಮಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ಆಧಾರ ಗ್ರಂಥಗಳು**


- ಹಿರೇಮಲ್ಲೂರು ಈಶ್ವರನ್ (2018). *ಲಿಂಗಾಯತ ಧರ್ಮ ಒಂದು ಅಧ್ಯಯನ.* ಸ್ನೇಹ ಪ್ರಿಂಟರ್ಸ್, ಬೆಂಗಳೂರು.
- ರಂಜಾನ್ ದರ್ಗಾ (2018). *ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ.* ಲಡಾಯಿ ಪ್ರಕಾಶನ, ಗದಗ.
- Desai, P.B. (1962). *Basaveshwara and its Contemporaries*. Kannada Study Center, Dharwad.
- Ghurye, G.S. (1950). *Caste and Class in India.* Popular Book Depot, Bombay.
- Lindeman, E. C. (1921). *The Community - An Introduction to the Study of Community Leadership and Organization*. Atlantic Publishers, Chennai, T.N.
- Malavad, S.S. (1980). *Veerashaivism and Vachanakaras*. Basava Samiti, Bangalore.
- Ramanath Sharma (1979). *Principles of Sociology*. Media Promoters and Publishers, Bombay.
- Sadashivaiah, H.M. (1936). *Discourse on Veerashaivism.* Bharathi Vidyabhavan, Bombay.
- Shashikanth Sanganal Matt (1992). *Veerashaivism*. S.M. Aralimatti Udaya Publications, Bangalore.
- Srinivas, M. N. (1972). *Caste in Modern India and Other Essays.* Asia Publishing House, Bombay.
- Srinivas, M.N. (1987). *The Dominant Caste and Other Essays*. Oxford University Press, Delhi.